ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಭಾಂಗಣದಲ್ಲಿ ದಿನಾಂಕ 3-3-2015 ರಂದು ಜರುಗಿದ
**ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೆರಡನೇಯ ಸಭೆಯ ನಡುವಳಿಗಳು:**

**ಉಪಸ್ಥಿತರಿದ್ದ ಸದಸ್ಯರು:**

| | | |
|---|---|---|
| 1. | ಡಾ. ಪಿ.ಎಂ. ಸಾಲಿಮಠ | ಅಧ್ಯಕ್ಷರು |
| 2. | ಶ್ರೀ ಹೆಚ್.ಎಸ್. ಸಾದತ್ ಅಲಿ ಖಾನ್ | ಸದಸ್ಯರು |
| 3. | ಶ್ರೀ ಪ್ರವೀಣ ವಿ. ನಾಯಕ್ | ಸದಸ್ಯರು |
| 4. | ಡಾ. ಪಿ. ಬಾಲಕೃಷ್ಣನ್ | ಸದಸ್ಯರು |
| 5. | ಡಾ. ಡಿ.ಎಂ. ಚಂದರಗಿ | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೆರಡನೇಯ ಸಭೆಗೆ ಸರ್ವಸದಸ್ಯರನ್ನು ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಸ್ವಾಗತ ಕೋರಿದರು. ಡಾ. ಪಿ.ಎಂ. ಸಾಲಿಮಠ, ಕುಲಪತಿಗಳು ವಿಶ್ವವಿದ್ಯಾಲಯದ ಐದನೇಯ ಘಟಿಕೋತ್ಸವದ ಸಿದ್ಧತೆಯ ಕುರಿತು ಸಂಕ್ಷಿಪ್ತವಾಗಿ ವಿವರಿಸಿದರು. ತದನಂತರ, ಕಾರ್ಯಸೂಚಿಯ ಪ್ರಕಾರ ಚರ್ಚಿಸಿ, ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| **ಐಟಂ-1** | **ದಿನಾಂಕ 20-1-2015 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೊಂದನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು**<br><br>**ಠರಾವು:**<br>ದಿನಾಂಕ 20-1-2015 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೊಂದನೇಯ ಸಭೆಯ ನಡುವಳಿಕೆಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಲಾಯಿತು.<br>**(ಕ್ರಮ: ಕುಲಸಚಿವರು)** |
| **ಐಟಂ-2** | **ದಿನಾಂಕ 20-1-2015 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೊಂದನೇಯ ಸಭೆಯ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳನ್ನು ಅನುಮೋದಿಸುವುದು**<br><br>**ಠರಾವು:**<br>ದಿನಾಂಕ 20-1-2015 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೊಂದನೇಯ ಸಭೆಯ ನಡುವಳಿಕೆಗಳ ಪ್ರಕಾರ ಕೈಗೊಂಡ ಕ್ರಮಗಳಲ್ಲಿ ಕಾರ್ಯಸೂಚಿ ಸಂಖ್ಯೆ. 6, 10 ಮತ್ತು 11 ರನ್ನು ಹೊರತುಪಡಿಸಿ ಉಳಿದ ವಿಷಯಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ವಿಶ್ವವಿದ್ಯಾಲಯ ಆದೇಶ ಸಂಖ್ಯೆ ಕುಸ/ಕೃವಿವಿರಾ/ವ್ಯ.ಮಂ.ಸಭೆ-21/4545/2014-15 ದಿನಾಂಕ 12-2-2015 ರನ್ನು ಅನುಮೋದಿಸುತ್ತ, ಕಳೆದ ಐದು ವರ್ಷಗಳಲ್ಲಿ ಕೈಗೊಂಡ ಕಾಮಗಾರಿಗಳನ್ನು ಪರಿಶೀಲಿಸಲು ಮಾರ್ಗಸೂಚಿಗಳನ್ನು ರಚಿಸುವ ಸಲುವಾಗಿ ಸಮಿತಿಯ ಮೊದಲನೇಯ ಸಭೆಯನ್ನು ಸದ್ಯದಲ್ಲಿಯೇ ಏರ್ಪಡಿಸಲು ಸಲಹೆ ನೀಡಿತು.<br><br>ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳ ವಿಷಯಕ್ಕೆ (ಕಾರ್ಯಸೂಚಿ ಸಂಖ್ಯೆ. 6) ಅನುಮೋದಿಸುತ್ತ, ಸದ್ಯದ ಕಾಮಗಾರಿಗಳ ಕಾಲ ವಿಸ್ತರಣೆಯ ವಿನಂತಿಯ ಕುರಿತ ಸಮಸ್ಯೆಗಳ ನೈಜತೆಯನ್ನು ಪರಿಶೀಲಿಸಲು ಸಲಹೆ ನೀಡಿತು.<br><br>ಸಿ.ಎ.ಎಸ್. 2006ರಡಿಯಲ್ಲಿ ಶಿಕ್ಷಕರ ಪದೋನ್ನತಿಯ ವಿಷಯಕ್ಕೆ (ಕಾರ್ಯಸೂಚಿ ಸಂಖ್ಯೆ. 10) ಅನುಮೋದಿಸುತ್ತ, ಈ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಮೌಲ್ಯಮಾಪಕರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಸಿ.ಎ.ಎಸ್. 2006 ಪ್ರಕಾರ ಪದೋನ್ನತಿಗಾಗಿ ಕನಿಷ್ಠ ಅರ್ಹತೆಯನ್ನು ವಿಶೇಷವಾಗಿ ನಾಸ್ ರೇಟೆಡ್ / ರೇಫ್ರಿಡ್ ಪ್ರಕಟಣೆಗಳ ಕುರಿತು ತಿದ್ದುಪಡಿಯಾದ ಬಗ್ಗೆ ಪರಿಶೀಲಿಸಲು ಸಭೆಯು ಸಲಹೆ ನೀಡಿತು.<br><br>ಕಾರ್ಯಸೂಚಿ ಸಂಖ್ಯೆ. 11 ಕ್ಕೆ ಅನುಮೋದನೆ ನೀಡುತ್ತ ಕೃವಿವಿ., ರಾಯಚೂರಿನಲ್ಲಿ ಗುತ್ತಿಗೆ ಆಧಾರದ ಮೇಲೆ ತೊಡಗಿಸಿಕೊಂಡ ಪದವಿದರರಿಗೆ ನೀಡಲಾಗುತ್ತಿರುವ ಗೌರವಧನವನ್ನು ಇತರೆ ಪದವಿಧರರಾದ ಕೃಷಿ ತಾಂತ್ರಿಕತೆ / ಮೂಲ ವಿಜ್ಞಾನ ಪದವಿಧರರಿಗೆ ನೀಡಲು ಸಲಹೆ ನೀಡಿತು.<br>**(ಕ್ರಮ: ಕುಲಸಚಿವರು)** |

| | |
|---|---|
| ಐಟಂ–3 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಐದನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕ ಪದವಿಗಳ ಪ್ರದಾನ ಕುರಿತು.<br><br>ಠರಾವು:<br>ಚರ್ಚೆಯ ನಂತರ, ಅರ್ಹ ಅಭ್ಯರ್ಥಿಗಳಿಗೆ ಸ್ನಾತಕ ಪದವಿಗಳನ್ನು ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಐದನೇಯ ಘಟಿಕೋತ್ಸವದಲ್ಲಿ ಪ್ರದಾನ ಮಾಡಲು ಘನ ವೇದಿಕೆಯು ಅನುಮೋದನೆ ನೀಡಿತು<br>(ಕ್ರಮ: ಕುಲಸಚಿವರು) |
| ಐಟಂ–4 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಐದನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿಗಳ ಪ್ರದಾನ ಕುರಿತು.<br>ಠರಾವು:<br>ಚರ್ಚೆಯ ನಂತರ, ಅರ್ಹ ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿಗಳನ್ನು ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಐದನೇಯ ಘಟಿಕೋತ್ಸವದಲ್ಲಿ ಪ್ರದಾನ ಮಾಡಲು ಘನ ವೇದಿಕೆಯು ಅನುಮೋದನೆ ನೀಡಿತು<br>(ಕ್ರಮ : ಕುಲಸಚಿವರು) |
| ಐಟಂ–5 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಐದನೇಯ ಘಟಿಕೋತ್ಸವದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಬಂಗಾರದ ಪದಕ ಹಾಗೂ ನಗದು ಬಹುಮಾನ / ಬಹುಮಾನಗಳನ್ನು ನೀಡುವ ಕುರಿತು. ಕುರಿತು.**<br><br>ಠರಾವು:<br>ಚರ್ಚೆಯ ನಂತರ, 15 ಕೃವಿವಿ ಬಂಗಾರದ ಪದಕಗಳನ್ನು ಅರ್ಹ ಸ್ನಾತಕೋತ್ತರ ಅಭ್ಯರ್ಥಿಗಳಿಗೆ ಹಾಗೂ 3 ಕೃವಿವಿ ಬಂಗಾರದ ಪದಕಗಳನ್ನು ಸ್ನಾತಕ ಅಭ್ಯರ್ಥಿಗಳಿಗೆ, 14 ಖಾಸಗಿ ಬಂಗಾರದ ಪದಕಗಳು, 2 ಖಾಸಗಿ ನಗದು ಬಹುಮಾನ / ಬಹುಮಾನಗಳನ್ನು ವಿಶ್ವವಿದ್ಯಾಲಯದ ವಿವಿಧ ಮಹಾವಿದ್ಯಾಲಯಗಳಲ್ಲಿಯ ಅರ್ಹ ಅಭ್ಯರ್ಥಿಗಳಿಗೆ ನೀಡಲು ಘನ ವೇದಿಕೆಯು ಅನುಮೋದನೆ ನೀಡಿತು.<br>(ಕ್ರಮ : ಕುಲಸಚಿವರು) |
| ಐಟಂ–6 | **ಅತ್ಯುತ್ತಮ ಬೋಧಕ / ವಿಜ್ಞಾನಿಗಳು ಮತ್ತು ಸೇವಾ ಸಿಬ್ಬಂದಿ / ಸಂಶೋಧನಾ ಕೇಂದ್ರ ಹಾಗೂ ಸಂಶೋಧನಾ ಯೋಜನೆಗಳನ್ನು ಪಡೆಯುವ ವಿಜ್ಞಾನಿಗಳಿಗೆ ಪ್ರೋತ್ಸಾಹ ಧನ / ಅತ್ಯುತ್ತಮ ರೈತ ವಿಜ್ಞಾನಿ ಪ್ರಶಸ್ತಿಗಳನ್ನು ಹಾಗೂ ಪ್ರೋತ್ಸಾಹ ಧನ ಪಡೆಯುವವರ ಯಾದಿಗೆ ಅನುಮೋದನೆ ಕುರಿತು**<br><br>ಠರಾವು:<br>ವಿಸ್ತೃತ ಚರ್ಚೆಯ ನಂತರ, ಅತ್ಯುತ್ತಮ ಬೋಧಕ / ವಿಜ್ಞಾನಿಗಳು ಮತ್ತು ಸೇವಾ ಸಿಬ್ಬಂದಿ / ಸಂಶೋಧನಾ ಕೇಂದ್ರ / ರೈತ ವಿಜ್ಞಾನಿ ಪ್ರಶಸ್ತಿಗಳನ್ನು ಹಾಗೂ ಸಂಶೋಧನಾ ಯೋಜನೆಗಳನ್ನು ಪಡೆಯುವ ವಿಜ್ಞಾನಿಗಳಿಗೆ ಪ್ರೋತ್ಸಾಹ ಧನ ಪಡೆಯುವವರ ಯಾದಿಗೆ ಘನ ವೇದಿಕೆಯು ಅನುಮೋದನೆ ನೀಡಿತು. ಮುಂದುವರೆದು, ಡೀನ್ (ವಿದ್ಯಾರ್ಥಿ ಕ್ಷೇಮಾಭಿವೃದ್ಧಿ) ಇವರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯ ಶಿಫಾರಸ್ಸಿನಂತೆ ಉತ್ತಮ ನಿಲಯಪಾಲಕರ ಪ್ರಶಸ್ತಿಯನ್ನು ಪರಿಗಣಿಸಲಾಗಿರುವುದಿಲ್ಲ.<br>(ಕ್ರಮ : ಕುಲಸಚಿವರು) |
| ಐಟಂ–7 | **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಅನುಮೋದನೆ ಕುರಿತು.**<br><br>ಠರಾವು:<br>ವಿವರವಾದ ಚರ್ಚೆಯ ನಂತರ, ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸುವ ಯಾದಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>(ಕ್ರಮ : ಸರಕು ಖರೀದಿ ಅಧಿಕಾರಿಗಳು) |
| ಐಟಂ–8 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಯೋಜನೆಗಳ ಆಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಘಟಕ (ಪಿ.ಪಿ.ಎಂ.ಸಿ.) ಸ್ಥಾಪಿಸುವ ಕುರಿತು**<br><br>ಠರಾವು:<br>ವಿವರವಾದ ಚರ್ಚೆಯ ನಂತರ, ಸದರಿ ವಿಷಯದ ಕುರಿತು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡುತ್ತ, ಕೃಷಿ ತಾಂತ್ರಿಕತೆಯ ಯೋಜನೆಗಳ ಆಯೋಜನೆ, ಮೇಲ್ವಿಚಾರಣೆ ಮತ್ತು |

| | |
|---|---|
| | ಮೌಲ್ಯಮಾಪನ ಮಾಡುವ ಸಲುವಾಗಿ ಪಿ.ಪಿ.ಎಂ.ಸಿ. ಯಲ್ಲಿ ಸಹಾಯಕ ಪ್ರಾಧ್ಯಾಪಕ (ಕೃಷಿ ತಾಂತ್ರಿಕ) ಹುದ್ದೆಯನ್ನು ಸೇರ್ಪಡಿಸಲು ಸಲಹೆ ನೀಡಿತು.<br><br>(ಕ್ರಮ: ಕುಲಸಚಿವರು) |
| ಐಟಂ– 9 | **ಬಾಹ್ಯ ಪರೀಕ್ಷಕರಿಂದ ಸ್ನಾತಕ ಕೋರ್ಸ್‌ಗಳಿಗಾಗಿ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಿದ್ದಕ್ಕೆ ನೀಡುವ ಸಂಭಾವನೆಯನ್ನು ರೂ. 500/– ರಿಂದ ರೂ. 1000/– ಗಳಿಗೆ ಹೆಚ್ಚಿಸುವ ಕುರಿತು**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಸದರಿ ವಿಷಯದ ಕುರಿತು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>(ಕ್ರಮ: ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು) |
| ಐಟಂ– 10 | **ಅಧ್ಯಯನ ಮಂಡಳಿ (ಸ್ನಾತಕ) ಮತ್ತು (ಸ್ನಾತಕೋತ್ತರ) ಯಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಗಾಗಿ ಪ್ರಸ್ತಾವನೆ ಕುರಿತು**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಅಧ್ಯಯನ ಮಂಡಳಿ (ಸ್ನಾತಕ) ಮತ್ತು (ಸ್ನಾತಕೋತ್ತರ) ಯಲ್ಲಿ ಆಹ್ವಾನಿತರಾಗಿ ವಿದ್ಯಾರ್ಥಿ ಪ್ರತಿನಿಧಿಯನ್ನು ತೆಗೆದುಕೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು.<br><br>(ಕ್ರಮ: ಕುಲಸಚಿವರು) |
| ಐಟಂ– 11 | **ಸ್ನಾತಕೋತ್ತರ ಪದವಿ ಕಾರ್ಯಕ್ರಮಕ್ಕಾಗಿ ಕೃವಿವಿ ರಾಯಚೂರಿನಲ್ಲಿ (ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಲ್ಲಿ) ಏಕರೂಪದ ಪ್ರವೇಶ ಪ್ರಕ್ರಿಯೆ ಕುರಿತು**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ, ಧಾರವಾಡವನ್ನು 2015–16 ರ ಶೈಕ್ಷಣಿಕ ಸಾಲಿಗಾಗಿ ನೋಡಲ್ ಕೇಂದ್ರವಾಗಿರಿಸಿ, ಸದರಿ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>(ಕ್ರಮ: ಕುಲಸಚಿವರು) |

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸಹಿ /– 18–3–2015

**(ಪಿ.ಎಂ. ಸಾಲಿಮಠ)**
ಕುಲಪತಿಗಳು ಹಾಗೂ ಅಧ್ಯಕ್ಷರು
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

ಸಹಿ /– 18–3–2015

**(ಡಿ.ಎಂ. ಚಂದರಗಿ)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

**(ಡಿ.ಎಂ. ಚಂದರಗಿ)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.